


ಟೋಕಿಯೊ ನಗರದಲ್ಲಿರುವ ವಿಶೇಷ ಸ್ಥಳ ಶಿಬುಯಾ ಕ್ರಾಸಿಂಗ್

# ಹಚ್ಚ ಹಸುರಿನ ನಡುವಿನ ತಂತ್ರಜ್ಞಾನದ ನಗರ ಟೋಕಿಯೊ

ಜಪಾನ್‌ನ ಟೋಕಿಯೊ, ತಂತ್ರಜ್ಞಾನ, ಸಂಸ್ಕೃತಿ ಎರಡನ್ನೂ ಮೇಳೈಸಿಕೊಂಡಿರುವ ಸುಂದರ ನಗರ. ಇಲ್ಲಿನ ಹಲವು ತಾಣಗಳು ನೋಡುಗರ ಕಣ್ಮನಗಳನ್ನು ಆವರಿಸುತ್ತವೆ.

■ ವೇಣು ಕೊಪ್ಪ



ಜಪಾನ್! ಏಷ್ಯಾ ಖಂಡದ ಪುಟ್ಟ ದ್ವೀಪ ರಾಷ್ಟ್ರ. ಇತ್ತೀಚೆಗೆ ಜಪಾನ್ ರಾಜಧಾನಿ ಟೋಕಿಯೊ ನಗರಕ್ಕೆ ಭೇಟಿ ನೀಡುವ ಸಂದರ್ಭ ಒದಗಿಬಂದಿತ್ತು. ತಂತ್ರಜ್ಞಾನ ಮತ್ತು ಸಂಸ್ಕೃತಿ ಎರಡರಲ್ಲೂ ಮುಂಚೂಣಿಯಲ್ಲಿರುವ ಸುಂದರ ನಗರ ಟೋಕಿಯೊ. ಸುಮಾರು 12 ಕೋಟಿಯಷ್ಟಿರುವ ಜಪಾನ್ ಜನಸಂಖ್ಯೆಯಲ್ಲಿ 3.45 ಕೋಟಿಯಷ್ಟು ಜನಸಂಖ್ಯೆ ಟೋಕಿಯೊ ನಗರದಲ್ಲೇ ಇದೆ.

ಬೆಂಗಳೂರಿನಿಂದ ಟೋಕಿಯೊ ನಗರಕ್ಕೆ ಸುಮಾರು 8 ಗಂಟೆ 30 ನಿಮಿಷಗಳ ವಿಮಾನ ಪ್ರಯಾಣ. ನಾರಿಟ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಟೋಕಿಯೊ ನಗರದಿಂದ ಸುಮಾರು 90 ಕಿ.ಮೀ. ದೂರದಲ್ಲಿದೆ. ಟೋಕಿಯೊ ನಗರದ ವಿಶೇಷತೆಗಳಲ್ಲಿ ಅತಿ ಮುಖ್ಯವಾದದ್ದು ಅಲ್ಲಿನ ರೈಲ್ವೆ